## ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಅಫಜಲಪೂರ.

**ಸಿಸಿ ನಂ.1194/2022**

**ಫಿರ್ಯಾದಿಃ** ಸರಕಾರದ ಪರವಾಗಿಃ ದೇವಲಗಾಣಗಾಪೂರ ಪೊಲೀಸ ಠಾಣೆ.

-ಃ ವಿರುದ್ದ ಃ-

**ಆರೋಪಿ/ತರುಃ**

1. ರವಿ ತಂದೆ ವಿಠಲ ಚವಾಣ್,
ವಃ 37 ವರ್ಷ, ಉಃ ಕೂಲಿ ಕೆಲಸ,
2. ಜೈನುಬಾಯಿ ಗಂಡ ರವಿ ಚವಾಣ್,
ವಃ 28 ವರ್ಷ, ಉಃ ಹೊಲ ಮನೆ ಕೆಲಸ,
3. ಸುಮಿತ್ರಾ ಗಂಡ ಜಾಪುಸಿಂಗ ಚವಾಣ್,
ವಃ 45 ವರ್ಷ, ಉಃ ಕೂಲಿ ಕೆಲಸ,
4. ವಿಶ್ವನಾಥ ತಂದೆ ವಿಠಲ ಚವಾಣ್,
ವಃ 30 ವರ್ಷ, ಉಃ ಕೂಲಿ ಕೆಲಸ,
5. ಶ್ರೀನಾಥ ತಂದೆ ವಿಠಲ ಚವಾಣ್,
ವಃ 34 ವರ್ಷ, ಉಃ ಕೂಲಿ ಕೆಲಸ,
6. ರತ್ನಾಬಾಯಿ ಗಂಡ ವಿಠಲ ಚವಾಣ್,
ವಃ 34 ವರ್ಷ, ಉಃ ಕೂಲಿ ಕೆಲಸ,

ಎಲ್ಲರ ವಾಸಃ ಗೊಬ್ಬುರವಾಡಿ ತಾಂಡಾ, ತಾಃ ಅಫಜಲಪೂರ,
ಜಿಃ ಕಲಬುರಗಿ.

## ದೋಷಾರೋಪಣೆ

ನಾನು ಶ್ರೀ ಅನಿಲ ಅಮಾತೆ, ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಅಫಜಲಪೂರ, ಈ ಮೂಲಕ ಕೆಳಕಂಡಂತೆ ನಿಮ್ಮನ್ನು ಆರೋಪಕ್ಕೆ ಗುರಿಪಡಿಸುತ್ತೇನೆ.

1. ದಿನಾಂಕಃ 30.05.2022 ರಂದು ಮಧ್ಯಾಹ್ನ 02-00 ಗಂಟೆ ಸುಮಾರಿಗೆ ದೇವಲಗಾಣಗಾಪೂರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಗೊಬ್ಬೂರವಾಡಿ ತಾಂಡಾದ ಫಿರ್ಯಾದಿ ಚಾಸಾ-1 ಶ್ರೀಮತಿ ಅನೀತಾ ರವರ ಮನೆಯ ಮಂದಿನ ರಸ್ತೆಯ ಮೇಲೆ 1 ರಿಂದ 6ನೇ ಆರೋಪಿತರಾದ ನೀವು ಫಿರ್ಯಾದಿ ಚಾಸಾ-1 ರವರ ಜೊತೆಗೆ ಸಂಸಾರಿಕ ವಿಷಯದಲ್ಲಿ ಏಕೋದ್ದೇಶದಿಂದ ಅಕ್ರಮಕೂಟ ರಚಿಸಿಕೊಂಡು ಬಂದಿದ್ದು, ಆ ಮೂಲಕ

ನೀವು ಭಾ.ದಂ.ಸಂ. 143 ಸಹವಾಚಕ ಕಲಂ 149ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

2. ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ ಅಕ್ರಮಕೂಟ ರಚಿಸಿಕೊಂಡು ಬಂದು ಫಿರ್ಯಾದಿ ಚಾ.ಸಾ.1 ಶ್ರೀಮತಿ ಅನೀತಾ ರವರ ಮನೆಯ ಮುಂದಿನ ರಸ್ತೆಯ ಮೇಲೆ ದೊಂಬಿ ಎಬ್ಬಿಸಿದ್ದು, ಆ ಮೂಲಕ ನೀವು ಭಾ.ದಂ.ಸಂ.147 ಸಹವಾಚಕ ಕಲಂ 149ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

3. ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ ಅಕ್ರಮಕೂಟ ರಚಿಸಿಕೊಂಡು ಬಂದು ಸಂಸಾರಿಕ ವಿಷಯದಲ್ಲಿ ಫಿರ್ಯಾದಿ ಚಾಸಾ-1 ಶ್ರೀಮತಿ ಅನೀತಾ ರವರಿಗೆ "ಏ ರಂಡಿ" ನೀನು ಮೇಂಟಲ ಇದ್ದಿ ನೀನು ಇಲ್ಲಿ ಇರಬೇಡ ನಿನ್ನ ತವರು ಮನೆಗೆ ಹೋಗು ಅಂತಾ ಅವಾಚ್ಯ ಶಬ್ದಗಳಿಂದ ಬೈದು, ಅವಮಾನ ಪಡಿಸಿದ್ದು, ಚಾಸಾ-1 ರವರು ಸಮಾಜದ ಶಾಂತಿಯನ್ನು ಕೆಡಿಸುವಂತೆ ಚಾಸಾ-1 ರವರನ್ನು ಉದ್ರೇಕಿಸಿದ ಕಾರಣ, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ.504 ಸಹವಾಚಕ ಕಲಂ.149 ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

4. ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವುಗಳು ಅಕ್ರಮಕೂಟ ರಚಿಸಿಕೊಂಡು ಬಂದು ನಿಮ್ಮಲ್ಲಿ 2, 3 ಮತ್ತು 6ನೇ ಆರೋಪಿತರಾದ ನೀವುಗಳು ಫಿರ್ಯಾದಿ ಚಾಸಾ-1 ಅನೀತಾ ರವರ ಕೂದಲು ಹಿಡಿದು ಎಳೆದಾಡಿ ಕೈಯಿಂದ ಬೆನ್ನ ಮೇಲೆ ಹೊಡೆದು, 4 ಮತ್ತು 5ನೇ ಆರೋಪಿತರಾದ ನೀವುಗಳು ಚಾಸಾ-1 ರವರಿಗೆ ನಾವು ಹೇಳಿದ ಹಾಗೆ ಕೇಳು ಇಲ್ಲದ್ದಿದ್ದರೆ ನಿನ್ನ ತವರು ಮನೆಗೆ ಹೋಗು ಅಂತಾ ಅಂದಾಗ, ಆಗ ಚಾಸಾ-1 ರವರು ನಾನು ಹೋಗುವುದಿಲ್ಲ ಅಂತಾ ಅಂದಾಗ, ಚಾಸಾ-1 ರವರಿಗೆ 1ನೇ ಆರೋಪಿತನಾದ ನೀವು ಕೈಯಿಂದ ಚಾಸಾ-1 ರವರ ಕಪಾಳದ ಮೇಲೆ ಹೊಡೆದು, ಸಾಮಾನ್ಯ ಸ್ವರೂಪದ ನೋವುಂಟು ಮಾಡಿದ ಕಾರಣ, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ.323 ಸಹವಾಚಕ ಕಲಂ 149 ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

5. ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವುಗಳು ಅಕ್ರಮಕೂಟ ರಚಿಸಿಕೊಂಡು ಬಂದು ನಿಮ್ಮಲ್ಲಿ 4 ಮತ್ತು 5ನೇ ಆರೋಪಿತರಾದ ನೀವುಗಳು ಫಿರ್ಯಾದಿ ಚಾಸಾ-1 ಅನೀತಾ ರವರಿಕೆ ಮಾನಭಂಗ ಮಾಡುವ ಉದ್ದೇಶದಿಂದ ಕೈ ಹಿಡಿದು ಎಳೆದಾಡಿ ಹೆಣ್ಣುತನಕ್ಕೆ ಅಗೌರವ ತೋರಿಸಿದ ಕಾರಣ, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ.354 ಸಹವಾಚಕ ಕಲಂ 149 ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

6. ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವುಗಳು ಅಕ್ರಮಕೂಟ ರಚಿಸಿಕೊಂಡು ಬಂದು ಫಿರ್ಯಾದಿ ಚಾಸಾ-1 ಅನೀತಾ ರವರಿಗೆ ಸಂಸಾರಿಕ ವಿಷಯದಲ್ಲಿ ರಂಡಿ ಬೋಸಡಿ ಅಂತಾ ಬೈದು, ನಿನ್ನ ತವರು ಮನೆಗೆ ಹೋಗು ಇಲ್ಲದಿದ್ದರೆ ನಿನ್ನ ಜೀವ ಖಲಾಸ್ ಮಾಡುತ್ತೇವೆ ಅಂತಾ ಜೀವದ ಬೆದರಿಕೆ ಹಾಕಿದ ಕಾರಣ, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.ಕಲಂ.506 ಸಹವಾಚಕ ಕಲಂ 149 ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

**ಆರೋಪಿತರ ಹೇಳಿಕೆಗಳು**

ಪ್ರ:-1) ಈ ಓದಿ ಹೇಳಲಾದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿರಾ?

ಉ: ಆ-1

ಆ-2

ಆ-3

ಆ-4

ಆ-5

ಆ-6

ಪ್ರ:-2) ನಿಮ್ಮ ತಪ್ಪನ್ನು ಒಪ್ಪಿಕೊಳ್ಳುತ್ತಿರೊ ಅಥವಾ ವಿಚಾರಣೆ ನಡೆಯಬೇಕಾ?

ಉ: ಆ-1

ಆ-2

ಆ-3

ಆ-4

ಆ-5

ಆ-6

(ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಿದ್ದು, ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿದ್ದು, ಅದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ)

ದಿನಾಂಕ 26.12.2025 ಪ್ರ.ದ.ನ್ಯಾ.ದಂ. ಅಫಜಲಪೂರ.